ತಿರುಮಲೆ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಡಿಸೆಂಬರ್ 2020

## ಸಪ್ತಗಿರಿ ಅನುಬಂಧ





ತಿರುಮಲೆ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ



ಸಪ್ತಗಿರಿ ಅನುಬಂಧ

ಸಂಪುಟ -01 ಡಿಸೆಂಬರ್ - 2020 ಸಂಚಿಕೆ -10

## ವಿಷಯ ಸೂಚಿಕೆ


| | | ಪುಟ |
|---|---|---|
| ಹಿಂದೂ ದೇವರು | ಆಂಜನೇಯ ವಿವಿಧ ಪರಿಕಲ್ಪನೆಗಳು<br>-ಟಿ.ವಿ. ವೆಂಕಟರಮಣಯ್ಯ | 32 |
| ಹನ್ನೆರಡು ಆಳ್ವಾರರು | ಮಧುರ ಕವಿ ಆಳ್ವಾರ್<br>- ಶ್ರೀಮತಿ. ಡಾ|| ಸಿ.ಎಸ್. ಊರ್ಮಿಳಾ | 34 |
| ಕನ್ನಡ ಹರಿದಾಸವರೇಣ್ಯರು | ಶ್ರೀ ಮಧ್ವಾಚಾರ್ಯರು<br>- ಡಾ|| ರಾಮಚಂದ್ರದಾಸ್ ಸಿ.ಜೆ. | 36 |
| ಚಿತ್ರಕಥೆ | ಪ್ರಹ್ಲಾದನ ಕಥೆ<br>ಕಥೆ - ಶ್ರೀನಿವಾಸ ದೀಕ್ಷಿತರು<br>ಚಿತ್ರಗಳು - ಕೆ. ತುಳಸೀಪ್ರಸಾದ್ | 38 |
| ಬಾಲನೀತಿ | ಪ್ರಾಮಾಣಿಕತೆಯ ಫಲ<br>ಶ್ರೀಮತಿ. ಸುಧಾಮಧುಸೂದನ್ | 42 |
| ಪ್ರಜ್ಞಾವಂತ ಬಾಲಕ - | ಚಿ|| ಕೆ. ಅಚ್ಯುತ್ ಶರ್ಮ | 44 |
| ಕ್ವಿಜ್ | -ಶ್ರೀಮತಿ. ಸೂರ್ಯವಂಶಿ | 45 |
| ಚಿತ್ರಲೇಖನ | | 46 |


ಮುಖಚಿತ್ರ - ಶ್ರೀ ಗೋದಾದೇವಿ

ಹಿಂಬದಿಚಿತ್ರ - ಶ್ರೀ ಸೀತಾರಾಮರಿಗೆ ನಮಸ್ಕರಿಸುತ್ತಿರುವ ಹನುಮಂತನು



# ಆಂಜನೇಯ ವಿವಿಧ ಪರಿಕಲ್ಪನೆಗಳು

- ಟಿ.ವಿ. ವೆಂಕಟರಮಣಯ್ಯ

ರಾಮದೂತ ಆಂಜನೇಯ ಒಬ್ಬ ವಾನರ ಶ್ರೇಷ್ಠ. ಅಂಜನಾದೇವಿಯಲ್ಲಿ ಈಶ್ವರಾಂಶದಿಂದ ವಾಯುವಿನ ಮೂಲಕ ಜನಿಸಿದವ. ಈತನ ಜನಪ್ರಿಯ ಹೆಸರು ಹನುಮಂತ ಎಂದು, ಈ ಬಗ್ಗೆ ಪುರಾಣ ಪ್ರಸಿದ್ಧವಾದ ಒಂದು ಕಥೆ ಹೀಗಿದೆ : 'ಆಂಜನೇಯ ಜನಿಸಿದ ಕೂಡಲೇ ಆಗ ತಾನೇ ಉದಯಿಸುತ್ತಿದ್ದ ಸೂರ್ಯಬಿಂಬವನ್ನು ಕಂಡು, ಫಲವೆಂಬ ಭ್ರಾಂತಿಯಿಂದ ಅಂತರಿಕ್ಷಕ್ಕೆ ನೆಗೆದು ಸೂರ್ಯನನ್ನು ಪೀಡಿಸಿದನು. ಇದರಿಂದ ಕೋಪಗೊಂಡ ಇಂದ್ರ ವಜ್ರಾಯುಧದಿಂದ ಇವನನ್ನು ಹೊಡೆಯಲಾಗಿ ಒಂದು ಕೆನ್ನೆ ಸುಟ್ಟು ಹೋಯಿತು.  ಈ ಕಾರಣದಿಂದಲೇ ಇವನಿಗೆ ಹನುಮಂತ ಎಂದು ಹೆಸರು. ಇತ್ತ ತನ್ನ ಮಗ ಗಾಯಪಟ್ಟುದನ್ನು ಕಂಡು ವಾಯುದೇವ ಸಂಚಾರವನ್ನು ನಿಲ್ಲಿಸಿದ. ಆಗ ದೇವತೆಗಳು ವಾಯುವನ್ನು ಸಂತೈಸಿ,ಹನುಮಂತನಿಗೆ ಚಿರಂಜೀವತ್ವವನ್ನೂ ವಾಯುವಿಗೆ ಸಮನಾದ ವೇಗವನ್ನೂ ಬಲವನ್ನೂ ಅನುಗ್ರಹಿಸಿದರು.

ಆಂಜನೇಯ ಪರಮ ಜ್ಞಾನಿ. ಮಹಾನ್ ಭಗವದ್ ಭಕ್ತ. ಚಿಕ್ಕವಯಸ್ಸಿನಲ್ಲಿಯೇ ಸೂರ್ಯನಿಂದ ವೇದಾದಿ ಸಕಲ ಶಾಸ್ತ್ರಗಳನ್ನೂ ಇಂದ್ರನಿಂದ ಒಂಭತ್ತು ಬಗೆಯ ವ್ಯಾಕರಣಗಳನ್ನೂ ಚೆನ್ನಾಗಿ ಅಭ್ಯಾಸ ಮಾಡಿ ನವವ್ಯಾಕರಣ ಪಂಡಿತ, ಸರ್ವ ವಿದ್ಯಾ ಪಾರಂಗತ ಎಂಬ ಕೀರ್ತಿಯನ್ನು ಗಳಿಸಿದವನು. ಈ ಬಗೆಯಾಗಿ ಆಂಜನೇಯನ ಶ್ರೇಯಸ್ಸು ಪುರಾಣ ಪ್ರಸಿದ್ಧ. ಹೀಗಿರುವುದರಿಂದಲೋ ಏನೋ ಆಂಜನೇಯ ಬಹುತೇಕ ಜನರ ಆರಾಧಕ ದೈವನಾಗಿ  ಮೆರೆದಿದ್ದಾನೆ. ಈತನ ವ್ಯಕ್ತಿತ್ವ, ಮಹಿಮಾದಿಗಳನ್ನು ಹಾಗೂ



ವ್ರತಾಚರಣೆಯ ವಿಧಿ ವಿಧಾನಗಳನ್ನು ಕುರಿತು ಹಲವು ಸಂಸ್ಕೃತ ಗ್ರಂಥಗಳು ರಚನೆಗೊಂಡಿವೆ. ಹನುಮಂತನ ಪೂಜಾವಿಧಾನಗಳನ್ನು ಕುರಿತಂತೆ ಬಳಸಲಾಗುತ್ತಿರುವ ಗ್ರಂಥಗಳಲ್ಲಿ, ೧. ಹನೂಮತ್ ಪ್ರತಿಷ್ಠಾ ೨. ಹನೂಮತ್ ಪ್ರತಿಷ್ಠಾಕಲ್ಪ ೩.ಹನೂಮತ್ ಪ್ರಬಂಧ ೪.ಹನೂಮತ್ ಸಹಸ್ರನಾಮಾನ್ ೫. ಹನೂಮತ್ ಅಷ್ಟಕ ೬.ಹನೂಮಾನ್ ಅಷ್ಟೋತ್ತರ ಶತ ನಾಮ ೭.ಹನೂಮಾತ್ ಗಹ್ವರ ೮. ಹನೂಮತ್ ದಂಡಕ ೯. ಹನೂಮತ್ ಭಟ್ಟಯಾತ್ ಇವನ್ನು ಮುಖ್ಯವಾಗಿ ಹೆಸರಿಸಬಹುದು.

ಆಂಜನೇಯ ಉತ್ತರ ಮಧ್ಯ ದಕ್ಷಿಣ ಭಾರತದಲ್ಲಿ ಕಂಡು ಬರುವ ಅತ್ಯಂತ ಜನಪ್ರಿಯ ದೇವತೆ. ಆಂಜನೇಯ ವಿಗ್ರಹಗಳು, ಕಂಚು, ತಾಮ್ರ, ಶಿಲೆ, ಮರ, ಇವುಗಳಿಂದ ಕೆತ್ತಲಾಗಿದೆ. ಚಂದೇಲ ದೊರೆ ಸಕಲೇಶವರ್ಮ ಕ್ರಿ.ಶ. ೯೨೨ ರ ಶಾಸನವೊಂದರಲ್ಲಿ ಕೆತ್ತಲಾಗಿರುವ ಹನುಮಂತವಿಗ್ರಹವೇ ಅತ್ಯಂತ ಪ್ರಾಚೀನವಾದುದೆಂದು ಭಾವಿಸಲಾಗಿದೆ. ಆದರೆ ಹನುಮಂತ ಜನತೆಯ ಆರಾಧ್ಯ ದೈವವಾಗಿ ಬೆಳಕಿಗೆ ಬಂದುದು ಯಾವಾಗ ಎಂಬುದು ಮಾತ್ರ ಅಷ್ಟೇ ಗಹನವಾದ ವಿಷಯ ಒಟ್ಟಿನಲ್ಲಿ ಹೊಯ್ಸಳ ಹಾಗೂ ವಿಜಯನಗರದ ಕಾಲದಲ್ಲಿ ಉಂಟಾದ ಹಿಂದೂ ಧರ್ಮದ ಪುನರುಜ್ಜೀವನದಿಂದಾಗಿ ಆಂಜನೇಯ ವಿಗ್ರಹಾರಾಧನೆಗೆ ವಿಶೇಷ ಪ್ರಾಮುಖ್ಯತೆ ಒದಗಿತೆಂದು ಹೇಳಲಾಗಿದೆ. ಏಕೆಂದರೆ ವಿಜಯನಗರದಿಂದ ಕನ್ಯಾಕುಮಾರಿಯವರೆಗೆ ಆಂಜನೇಯ ವಿಗ್ರಹಗಳನ್ನು ವ್ಯಾಸರಾಯರು ಪ್ರತಿಷ್ಠಾಪಿಸಿದರೆಂಬ ವದಂತಿಯಿದೆ. ಅಲ್ಲದೆ, ವ್ಯಾಸರಾಯರು ವಿಜಯನಗರದಲ್ಲಿ 720 ಆಂಜನೇಯ ದೇವರ ವಿಗ್ರಹಗಳನ್ನು ನಿರ್ಮಿಸಿದರೆಂಬುದು ಕೂಡ ಇಲ್ಲಿ ಗಮನಾರ್ಹ.

# ಮಧುರ ಕವಿ ಆಳ್ವಾರ್

ಶ್ರೀಮತಿ.ಸಿ.ಎಸ್. ಊರ್ಮಿಳಾ

**ಜನನ:** ತಿರುಕ್ಕೋಳಾರ್ ದ್ವಾಪರ 863879 ನೆ ಯ ಈಶ್ವರ ಸಂವತ್ಸರ ಮೇಷಮಾಸ ಚಿತ್ತಾ ನಕ್ಷತ್ರ

ಇವರು ಬ್ರಾಹ್ಮಣಕುಲದಲ್ಲಿ ವೈನತೇಯರ ಅಂಶವಾಗಿ ಜನಿಸಿದರೆಂಬ ಪ್ರತೀತಿ ಇದೆ. ಇವರ ಜನ್ಮಸ್ಥಳ ತಿರುಕ್ಕೋಳೂರ್ ವೇದ ಶಾಸ್ತ್ರಗಳನ್ನು ಅಭ್ಯಾಸಮಾಡಿ ಬಾಲ್ಯದಲ್ಲಿಯೇ ಕವಿಯಾದ ಕಾರಣ ಇವರನ್ನು ಮಧುರಕವಿ ಎಂದು ಕರೆಯುತ್ತಿದ್ದರು ಇವರ ಮೊದಲ ಹೆಸರು



ನಾರಾಯಣದೀಕ್ಷಿತ್ ಇವರು ಸಂಸಾರದಲ್ಲಿ ವಿರಕ್ತಿಹೊಂದಿ ಒಮ್ಮೆ ತೀರ್ಥಯಾತ್ರೆಯನ್ನು ಕೈಗೊಂಡರು ಅಯೋಧ್ಯೆಗೂ ಹೋಗಿದ್ದರು. ಅಲ್ಲಿ ಇವರಿಗೆ ಒಂದು ರಾತ್ರಿ ದಕ್ಷಿಣ ದಿಕ್ಕಿನಲ್ಲಿ ಒಂದು ಜ್ಯೋತಿ ಕಾಣಿಸಿತು. ಇದೇ

ನಿದು ವಿಶೇಷ ಎಂದು ಭಾವಿಸಿ ಅದನ್ನೇ ಅರಸುತ್ತಾ ಕುರಿಕಾ ಪುರಿಯನ್ನು ಸೇರಿದರು.ಆ ಸ್ಥಳದಲ್ಲಿಯೇ ಜ್ಯೋತಿಯು ಮಾಯವಾಯಿತು. ಆ ಸ್ಥಳ ದಲ್ಲಿಯೇ ಜ್ಯೋತಿಯ ಮರ್ಮ ಇರಬೇಕೆಂದು ಆ ಊರಿನವರನ್ನು ವಿಚಾ ರಿಸಿದರು.ಅವರ ಸಹಾಯದಿಂದ ಒಂದು ಹುಣಸೇಮರದ ಅಡಿಗೆ ಮಧುರಕವಿಗಳು ಹೊರಟರು. ಅಲ್ಲಿ ಅವರಿಗೆ ಒಂದು ಆಶ್ಚರ್ಯಕಾದಿತ್ತು. ಹುಣಿಸೇ ಮರದ ಅಡಿಯಲ್ಲಿ ಒಬ್ಬರು ಧ್ಯಾನಮಗ್ನರಾಗಿ ಕುಳಿತಿದ್ದರು. ಅವರಿಗೆ ಚೈತನ್ಯವಿದೆಯೇ ಎಂದು ಪರೀಕ್ಷಿಸಲು ಒಂದು ಕಲ್ಲನ್ನು ಎತ್ತಿ ಆಳ್ವಾರರ ಸಮೀಪದಲ್ಲಿ ಹಾಕಿದರು.ಆಗ ನಮ್ಮಾಳ್ವಾರರು ಕಣ್ಣು ಬಿಟ್ಟರು. ಮಧುರಕವಿಗಳು, ಯೋಗ ಮುದ್ರೆಯಲ್ಲಿರುವ ಆಚಾರ್ಯರನ್ನು ಸ್ತುತಿಸಿದರು. ವಯಸ್ಸಿನಲ್ಲಿ ಚಿಕ್ಕವರಾಗಿದ್ದರೂ ನಮ್ಮಾಳ್ವಾರರನ್ನೇ ತಮ್ಮ ಗುರುಗಳನ್ನಾಗಿ ಭಾವಿಸಿದರು. ನಮ್ಮಾಳ್ವಾರರಿಗೆ ಅನವರತವೂ ಅಂತರಂಗ ಕೈಂಕರ್ಯ ಮಾಡಿದರು.ತಮ್ಮ ಆಚಾರ್ಯರನ್ನು ಬಿಟ್ಟು ಬೇರೆ ದೇವರ ಸಹವಾಸವೇ ಬೇಡ ಎಂದು ದಿಟ್ಟತನದಿಂದ ಮಧುರಕವಿಆಳ್ವಾರರು ಹೇಳಿದ್ದಾರೆ. ಇವರು "ಕಣ್ಣಿನುಣ್‌ಶಿರುತ್ತಾಂಬು" ಎಂಬ ಹನ್ನೊಂದು ಪಾಶುರಗಳಿಂದ ಉಜ್ಜೀವಿ ಸುವಂತೆ ಮಾಡಿರಿ ಎಂದು ಪ್ರಾರ್ಥಿಸಿದ್ದಾರೆ.

ಮಧುರ ಕವಿಗಳ ಮೊದಲ ಪಾಶುರ

ಕಣ್ಣಿನುಣ್ ಶಿರುತ್ತಾಮ್ಬಿನಾಲ್ ಕಟ್ಟುಣ್ಣ

ಪ್ಪಣ್ಣಿಯ ಪೆರುಮಾಯನ್ ಎನ್ನ ಪ್ಪನಿಲ್

ನಣ್ಣಿ ತೆನ್ ಕುರುಹೂರ್ ನಮ್ಬಿ ಎನ್ರುಕ್ಕಾಲ್

ಅಣ್ಣಿಕ್ಕುಂ ಅಮುದೂರಮ್ ಎನ್ನಾವುಕ್ಕೇ



# ಶ್ರೀ ಮಧ್ವಾಚಾರ್ಯರು

**(ಕ್ರಿ.ಶ. 1200-1280)**

**- ಡಾ|| ರಾಮಚಂದ್ರದಾಸ್ ಸಿ.ಜೆ.**

ಆಧ್ಯಾತ್ಮಿಕ ಜಗತ್ತಿಗೆ ಜ್ಞಾನದ ಬೆಳಕನ್ನು ನೀಡುವ ಗುರುಗಳಿಗಾಗಿ ಕಾತರದಿಂದ ಕಾಯುತ್ತಿದ್ದಾಗ, ಪಾಜಕ ಕ್ಷೇತ್ರದಲ್ಲಿ,ಮಧ್ಯಗೇಹ ಭಟ್ಟರು ಮತ್ತು ವೇದವತಿಯ ಮಗನಾಗಿ, ಅನಂತಾಸನ ಶ್ರೀ ಹರಿಯ ದಯದಿಂದ ವಿಜಯದಶಮಿಯಂದು ಮುಖ್ಯ ಪ್ರಾಣದೇವರು ಭೂಮಿಯಲ್ಲಿ ಅವತರಿಸಿದಾಗ ಪ್ರಕೃತಿಯಲ್ಲಿ ಆನಂದದ ಅಲೆಗಳು ಉಕ್ಕಿ ಹರಿಯುತ್ತಿದ್ದವು.ಮಗುವಿಗೆ “ವಾಸುದೇವ” ಎಂದು ನಾಮಕರಣ ಮಾಡಿದರು.ಮಗುವಿನೊಡನೆ ಉಡುಪಿಯಿಂದ ಪಾಜಕಕ್ಕೆ ರಾತ್ರಿಯಲ್ಲಿ ಹೋಗುವ ಸಮಯದಲ್ಲಿ ಒಂದು ಭೂತವು “ಈ ಮಗು ಅಸಾಮಾನ್ಯನಾದ ಲೋಕೇಶ್ವರ” ಎಂದು ಹೇಳಿ ಭಯಪಟ್ಟು ಓಡಿ ಹೋಯಿತು. ವಾಸುದೇವನು, ಬೇಯಿಸಿಟ್ಟಿದ್ದ ಹುರುಳಿಯನ್ನು ತಿಂದು ಅರಗಿಸಿಕೊಂಡದ್ದು, ಹಾಲಾಹಲವಿಷವನ್ನೇ ಅರಗಿಸಿಕೊಂಡ ತನಗೆ ಇದು ಯಾವ ಲೆಕ್ಕ ಎಂದು ತೋರಿಸಿದರು. ಮಗುವಿನ ಮುಖದಲ್ಲಿನ ಕಾಂತಿ ಇಡೀ ಊರ ಜನಕ್ಕೆ ಆನಂದ ನೀಡುತ್ತಿತ್ತು.ಒಂದು ವರ್ಷದವನಾಗಿದ್ದಾಗ ಎತ್ತಿನ ಬಾಲವನ್ನು ಹಿಡಿದು ವನ ಸಂಚಾರ ಮಾಡಿ ಹಿಂತಿರುಗಿದ್ದು,ಧರ್ಮ ಸಂರಕ್ಷಣೆಯ ಸೂಚನೆಯಾಗಿತ್ತು. ತಂದೆಯು ಸಾಲದ ಸುಳಿಯಲ್ಲಿ ನರಳುತ್ತಿರುವಾಗ ಧನಿಕನಿಗೆ ಹುಣಿಸೆಯ ಬೀಜಗಳನ್ನು ನೀಡಿದಾಗ ಅವು ಚಿನ್ನದ ಬೀಜಗಳಾಗಿ ತಂದೆಯ ಋಣ ಪರಿಹರಿಸಿದ್ದೂ ಅಲ್ಲದೆ, ಧನಿಕನ ಭವ ಬಂಧನವನ್ನು ಬಿಡಿಸಿದ್ದು ಅಪೂರ್ವ, ಮೂರು ವರ್ಷದವನಿದ್ದಾಗ ತಾನೊಬ್ಬನೇ ಉಡುಪಿಗೆ ಹೋಗಿ, ತನ್ನ ಜೊತೆಗೆ ಶ್ರೀಹರಿಯು ಅನೇಕ ರೂಪಗಳಿಂದಿದ್ದು, ರಕ್ಷಿಸಿದ ಎನ್ನುವುದು “ದ್ವಾಸುಪರ್ಣಾ.” ಎನ್ನುವ ಶೃತಿಯನ್ನು ಪ್ರತಿಪಾದಿಸಿದನು. ಭಟ್ಟರು ವಾಸು ದೇವನಿಗೆ ತಮ್ಮ ಮನೆಯ ದೊಡ್ಡ ಹಾಸುಗಲ್ಲಿನ ಮೇಲೆ ಅಕ್ಷರಾಭ್ಯಾಸ ಮಾಡಿಸಿದ್ದು, ಸೂರ್ಯನಿಗೆ ಬೆಳಕಾಗಲಿ ಎಂದು ದೀಪ ಹಚ್ಚಿದಂತಾಗಿತ್ತು. ಶಿವಭಟ್ಟನೆಂಬ ಪುರಾಣಿಕನು ಶಾಸ್ತ್ರದ ವಿಷಯವನ್ನು ತಪ್ಪುತಪ್ಪಾಗಿ ಹೇಳಿದಾಗ ಅದನ್ನು ಶಾಸ್ತ್ರ ಸಮ್ಮತವಾಗಿ ಖಂಡಿಸಿ ಅವನನ್ನು ಸೋಲಿಸಿ, ದುರ್ಮತದ ನಿವಾರಣೆಗೆ ಅಂದೇ ನಾಂದಿ ಹಾಡಿ,


ಮುಂದೆ ಮಹಾನ್ ಗ್ರಂಥ ಕರ್ತೃಗಳಾಗುವೆನೆಂಬುದನ್ನು ಸೂಚಿಸಿದರು, ಹಾಲು, ಮೊಸರಿನ ಪಾತ್ರೆಗಳ ಮೇಲೆ ದೊಡ್ಡ ದೊಡ್ಡ ಹಾಸುಗಲ್ಲನ್ನು ಇಟ್ಟಿದ್ದು ತಾಯಿಗೂ ಆಶ್ಚರ್ಯವೆನಿಸಿ, ತಾವು ಭೀಮಸೇನಾವತಾರಿ ಎಂಬುದನ್ನು ಜಗತ್ತಿಗೆ ತೋರಿಸಿದರು. ಉಪನಯನದ ನಂತರ,ಸನ್ಯಾಸಿಯಂತೆ ದಂಡವನ್ನು ಹಿಡಿದು ಓಡಾಡುವಾಗ, ತಂದೆಯ ಪ್ರಶ್ನೆಗೆ ಉತ್ತರಿಸುತ್ತಾ "ತಾನು ವೈಷ್ಣವ ಮತ ಸ್ಥಾಪನೆ ಮಾಡುತ್ತೇನೆ." ಎಂದು ಆ ಒಣಗಿದ ದಂಡವನ್ನು ಭೂಮಿ ಯಲ್ಲಿ ನೆಟ್ಟು ಚಿಗುರಿಸಿದ್ದು ಅತ್ಯಾಶ್ಚರ್ಯ, ಗುರುಕುಲ ವಾಸಿಯಾಗಿದ್ದಾಗ ಅಲ್ಲಿ ನೀರಿನ ವ್ಯವಸ್ಥೆಗಾಗಿ ದಂಡತೀರ್ಥ ನಿರ್ಮಾಣ ಮಾಡಿ ಅಚ್ಚರಿಗೆ ಕಾರಣರಾದರು.ಗುರುಗಳಿಗೆ ಜ್ಞಾನದ ಸಂದೇಶ ನೀಡಿ ಅವರಿಗೆ ಮೋಕ್ಷಕ್ಕೆ ಹಾದಿ ಸುಗಮ ಮಾಡಿದರು.ಎಲ್ಲ ಜೀವರ ಪ್ರಾಣಕ್ಕೆ ಅಭಿಮಾನಿ ದೇವತೆಯಾಗಿ ಪ್ರಜ್ಞೆ ನೀಡುವ, ವಾಸುದೇವನು ಅಚ್ಯುತಪ್ರೇಕ್ಷ ರಿಂದ ಸನ್ಯಾಸ ಸ್ವೀಕರಿಸಿ "ಶ್ರೀಪೂರ್ಣಪ್ರಜ್ಞತೀರ್ಥ"ರು ಎಂಬ ಸಾರ್ಥಕ ನಾಮದಿಂದ ಕಂಗೊಳಿಸಿದರು. ಭಾಗವತ ಗ್ರಂಥದ ಶುದ್ಧ ಪಾಠದ ಅವಿಷ್ಕಾರದಿಂದ "ಭಾಗವತ ತಾತ್ಪರ್ಯ ನಿರ್ಣಯ ಗ್ರಂಥ" ರಚನೆ ಯಾಯಿತು. ಗಂಗಾ ನದಿಯ ನೀರಿನ ಮೇಲೆ ನಡೆದದ್ದು, ಬದರಿ ಕ್ಷೇತ್ರಕ್ಕೆ ವಾಯುವೇಗದಲ್ಲಿ ಹೋಗಿ, ತಮ್ಮ ಹನುಮದವತಾರವನ್ನೂ ಹಾಗೂ ಭಾರೀ ಪ್ರಮಾಣದ ಆಹಾರ,ಹಣ್ಣು ಹಂಪಲನ್ನು ಸೇವಿಸಿ ತಾವು ವೃಕೋದರಾವತಾರಿಯೆಂಬುದನ್ನು ಪ್ರತಿಪಾದಿಸಿದರು. ಆನಂದತೀರ್ಥ ರಾದ ಪೂರ್ಣಪ್ರಜ್ಞರು, ಹನುಮನಾಗಿ, ಶ್ರೀರಾಮನಾಗಿ, ಭೀಮನಾಗಿ, ಶ್ರೀ ಕೃಷ್ಣನಿಗೆ ಮಧ್ವರಾಗಿ, ವೇದ ವ್ಯಾಸರಿಗೆ ನೈವೇದ್ಯ ಮಾಡುತ್ತಿರುವುದನ್ನು ನೋಡಿದ ತ್ರಿವಿಕ್ರಮ ಪಂಡಿತಾಚಾರ್ಯರು, ಅವತಾರತ್ರಯಗಳನ್ನು ವರ್ಣಿ ಸುವ ವಾಯುಸ್ತುತಿಯನ್ನು ರಚಿಸಿದರು.ಉಡುಪಿಯಲ್ಲಿ ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಿ ಆತನ ಸೇವೆಗಾಗಿ ಅಷ್ಟಮಠಗಳನ್ನು ಸ್ಥಾಪಿಸಿದರು.

ಭೂವೈಕುಂಠವೆಂದು ಪ್ರಸಿದ್ಧವಾದ, ಪಂಚರಾತ್ರ, ದ್ವಾದಶ ಪುರಾಣ ಗಳಲ್ಲಿ ವರ್ಣಿತವಾಗಿರುವ ಸ್ವಯಂವ್ಯಕ್ತ ಕ್ಷೇತ್ರವಾದ ತಿರುಪತಿಯ ಶ್ರೀನಿ ವಾಸನ ಬ್ರಹ್ಮೋತ್ಸವಾದಿ ವೈಭವ ಕಂಡು, ಸ್ತುತಿಸಿದರು.ಸರ್ವಮೂಲಾದಿ ಗ್ರಂಥಗಳನ್ನು ರಚಿಸಿದರು.ಇವರ ಶಿಷ್ಯರಲ್ಲಿ ಪದ್ಮನಾಭ,ನರಹರಿ, ಮಾಧವ, ಅಕ್ಷೋಭ್ಯತೀರ್ಥರಿದ್ದು, ಇವರ ಪರಂಪರೆ ಇಂದಿಗೂ ಮುಂದುವರೆ ಯುತ್ತಿದೆ. ಇವರ ಚರಿತ್ರೆಯನ್ನು ಹೊಗಳುವ ಸುಮಧ್ವವಿಜಯ ನಾರಾ ಯಣ ಪಂಡಿತಾಚಾರ್ಯರಿಂದ ರಚಿತವಾಗಿದೆ. ಇಂತಹ ಮಧ್ವಚಾ ರ್ಯರು ಮಾಘ ಶುದ್ಧನವಮಿ ಅದೃಶ್ಯರಾಗಿ ಅದ್ಯಾಪಿ ವೇದವ್ಯಾಸರಲ್ಲಿ ಆಧ್ಯಯನ ಮಾಡುತ್ತಿದ್ದಾರೆಂದು ಪ್ರತೀತಿ.

# ಚಿತ್ರಕಥೆ


## ಪ್ರಹ್ಲಾದನ ಕಥೆ

ಕಥೆ:ತೆಲುಗು ಮೂಲ:ಡಿ. ಶ್ರೀನಿವಾಸದೀಕ್ಷಿತರು
ಅನುವಾದ: ಶ್ರೀಮತಿ. ಆರ್. ಕೃಷ್ಣವೇಣಿ
ಚಿತ್ರಗಳು : ಕೆ.ತುಲಸೀ ಪ್ರಸಾದ್





ಪ್ರಹ್ಲಾದನು ದೈತ್ಯ ವಂಶದಲ್ಲಿ ಜನ್ಮಿಸಿದನು. ದೈವೀ ಗುಣಗಳೊಂದಿಗೆ ವಿಷ್ಣು ಭಕ್ತನು. ತಂದೆ ಹಿರಣ್ಯಕಶಿಪನು ವಿಷ್ಣು ದ್ವೇಷಿ,ಸೋದರನ ಮರಣಾ ನಂತರ ವಿಷ್ಣುವಿನ ಮೇಲೆ ಕೋಪಗೊಂಡು ಬ್ರಹ್ಮನ ಕುರಿತು ತಪಸ್ಸು ಮಾಡಿ ವರವನ್ನು ಕೇಳಲು ಕಾಡಿಗೆ ಹೋದನು.

ಆಗ ಆತನು ಮರಣಿಸಿದನೆಂದು ಆತನ ವಂಶವನ್ನು ನಾಶ ಪಡಿಸಲು ತುಂಬು ಗರ್ಭಿಣಿಯಾದ ಲೀಲಾವತಿಯನ್ನು ಅಪಹರಿಸಿಕೊಂಡು ಹೋಗುತ್ತಿರುವ ಇಂದ್ರನಿಂದ ಆಕೆಯನ್ನು ತನ್ನ ಯುಕ್ತಿಯಿಂದ ರಕ್ಷಿಸಿ ನಾರದರು ತನ್ನ ಆಶ್ರಮಕ್ಕೆ ಕರೆದುಕೊಂಡು ಹೋದರು.







ಆಶ್ರಮ ವಾತಾವರಣದಲ್ಲಿ ನಾರದನ ವಿಷ್ಣು ಬೋಧನೆಗಳನ್ನು ಗರ್ಭದಲ್ಲಿಯೇ ಕೇಳಿಸಿಕೊಂಡು ಅಪಾರವಿಷ್ಣು ಭಕ್ತನಾದನು. ಬ್ರಹ್ಮನಿಂದ ವರ ಪಡೆದ ಹಿರಣ್ಯ ಕಶಿಪನು ಪುತ್ರೋತ್ಸಾಹದೊಂದಿಗೆ ಲೀಲಾವತಿಯನ್ನು ಕರೆದುಕೊಂಡು ನಾರದನಿಗೆ ಕೃತಜ್ಞತೆಗಳನ್ನು ತಿಳಿಸಿದನು.



ಪ್ರಹ್ಲಾದನು ಐದು ವರ್ಷ ವಿದ್ಯಾಭ್ಯಾಸ ಮುಗಿಸಿ ತಂದೆಯ ಬಳಿಗೆ ಬಂದನು. ಮೊದಲೇ ಗರ್ಭದಲ್ಲಿ ಜ್ಞಾನವನ್ನು ಪಡೆದ ಪ್ರಹ್ಲಾದನು ವಿದ್ಯೆಯನ್ನು ಸುಲಭವಾಗಿ ಕಲಿತುಕೊಂಡನು. ಕುಮಾರನ ವಿದ್ಯೆಯನ್ನು ಪರೀಕ್ಷಿಸಿ ಆತನ ಹರಿಭಕ್ತಿಯನ್ನು ಕಂಡು ಸಹಿಸಲಿಲ್ಲ.




ಹರಿಭಕ್ತಿಯನ್ನು ಬಿಡುವ ತನಕ ದಯೆ ತೋರದೆ ಕತ್ತಲೆ ಕೋಣೆಯಲ್ಲಿ ಬಂಧಿಸಿ ಅನ್ನ ನೀರು ಕೊಡಬಾರದು ಇದು ನನ್ನ ಆಜ್ಞೆ ಎಂದರು.





ಹಿರಣ್ಯಕಶಿಪನ ಸೂಚನೆಯಂತೆ ಚಂಡಾಮಾರ್ಕನು ಪ್ರಹ್ಲಾದನಲ್ಲಿರುವ ಹರಿ ಭಕ್ತಿಯನ್ನು ಮರೆಸಲು ನಾನಾ ವಿಧವಾಗಿ ಪ್ರಯತ್ನಿಸಿದರೂ ವಿಫಲನಾದನು. ಇದರಿಂದ ಹಿರಣ್ಯಕಶಿಪುವಿನ ದ್ವೇಷವು ಹೆಚ್ಚಿತ್ತು.

ಪ್ರಭುಗಳ ಆಜ್ಞೆಯಂತೆ ದಂಡನಾಯಕನು ಅನ್ನ ಪಾನೀಯಗಳನ್ನು ನೀಡಲಿಲ್ಲ. ಆದರೂ ಪ್ರಹ್ಲಾದನು ಭಯ ಪಡದೆ ಹರಿನಾಮಸ್ಮರಣೆಯಲ್ಲಿಯೇ ಇದ್ದನು.


ಅನ್ನ ಆಹಾರಗಳನ್ನು ತೊರೆದು ಕುಮಾರನ ಚಿಂತೆಯಲ್ಲಿಯೇ ನೆಲದ ಮೇಲೆ ಕುಳಿತಿರುವ ತಾಯಿಯ ಬಳಿ ಪ್ರಹ್ಲಾದನಾಗಿ, ಮತ್ತು ಪ್ರಹ್ಲಾದನ ಬಳಿಗೆ ತಾಯಿಯಂತೆ ಆ ಮಹಾವಿಷ್ಣು ಬಂದು ಹಸಿವನ್ನು ನೀಗಿಸಿದನು.
ಹರಿಭಕ್ತಿಯನ್ನು ಬಿಡದ ಪ್ರಹ್ಲಾದನಿಗೆ ಕಠಿಣವಾದ ಶಿಕ್ಷೆಯನ್ನು ನೀಡಿದನು. ಹಿರಣ್ಯಕಶಿಪನು ಆಯುಧಗಳೊಂದಿಗೆ, ಆನೆಗಳೊಂದಿಗೆ,ತುಳಿಸಲು ಪ್ರಯತ್ನಿಸಲು ಆತನ ಭಕ್ತಿಗೆ ಆನೆಗಳೂ ಸಹ ತಲೆಬಾಗಿ ನಿಂತವು.
ಅಮ್ಮ ಮೊದಲು ನೀವು ಆಹಾರವನ್ನು ಸ್ವೀಕರಿಸಿ.
ಓಂ ನಮೋ ನಾರಾಯಣ
ಓಂ ನಮೋ ನಾರಾಯಣ
ಶೇಷ ಶಯನ ನಾರಾಯಣ
ಓಂ ನಮೋ ನಾರಾಯಣ
ಬೆಟ್ಟದ ಮೇಲಿನಿಂದ ಕೆಳಗೆ ಬೀಳಿಸಲು ಆಗ ಆ ಲಕ್ಷ್ಮಿವಲ್ಲಭನೇ ರಕ್ಷಿಸಿದನು.ಬಂಧಿಸಿ ಸಮುದ್ರದಲ್ಲಿ ಹಾಕಲು ಪ್ರಯತ್ನಿಸಿದರೆ ಆ ಮತ್ಸ್ಯಕನ್ಯೆಯರು ರಕ್ಷಿಸಿ ದಡಕ್ಕೆ ಸೇರಿಸಿದರು.ವಿಷ ಸರ್ಪಗಳಿಂದ ಕಚ್ಚಿಸಿದರೂ ಅದು ಹೂವಿನಾರವಾಯಿತು.ಅಗ್ನಿಯಲ್ಲಿ ಹಾಕಿದರು ಅದು ಪ್ರಹ್ಲಾದನನ್ನು ಸುಡಲಿಲ್ಲ. ಇವೆಲ್ಲಾ ತಿಳಿಸಿದರು ಹಿರಣ್ಯಕಶಿಪು ನಂಬಲಿಲ್ಲ. ತಾನೇ ಸ್ವತಃ ವಿಷವನ್ನು ತರಿಸಿ ತನ್ನ ಸ್ವಹಸ್ತದಲ್ಲಿ ಪ್ರಹ್ಲಾದನಿಗೆ ಕುಡಿಸಿದರು. ಪ್ರಹ್ಲಾದನಿಗೆ ಯಾವ ಹಾನಿಯುಂಟಾಗಲಿಲ್ಲ.
ಓಂ ನಮೋ ನಾರಾಯಣ

ಆಗ ಹಿರಣ್ಯ ಕಶಿಪನು ಈಗಲೇ ಈ ಗದೆಯೊಂದಿಗೆ ನಿನ್ನ ವಧಿಸುವೆನು ಎನ್ನಲು, ಆಗ ಪ್ರಹ್ಲಾದನು ಆ ಹರಿಯು ನನ್ನನ್ನು ರಕ್ಷಿಸುವನು ಎಂದನು.... ಎಲ್ಲಿ ನಿನ್ನ ಹರಿ ಈ ಸ್ತಂಭದಲ್ಲಿ ಇರುವನೇ  ಆ ನಿನ್ನ ಹರಿ ಎಂದಾಗ...




ಹರಿಯು ಸರ್ವಾಂತರ್ಯಾಮಿ ಎಲ್ಲೆಲ್ಲಿಯೂ ಇರುವನು  ಎಂದನು ಪ್ರಹ್ಲಾದನು.



ವಿಚ್ಛಿನ್ನವಾಗದ ಸ್ತಂಭದಿಂದ ಭಯಂಕರ ರೂಪದೊಂದಿಗೆ ಪ್ರಳಯ ಭಯಂಕರನಾಗಿ ಅವತರಿಸಿದನು ನೃಸಿಂಹಸ್ವಾಮಿ ಹಿರಣ್ಯಕಶಿಪನ ಹೊಟ್ಟೆಯನ್ನು ಹೋಳುಮಾಡಿ ವಧಿಸಿ ಪ್ರಹ್ಲಾದನನ್ನು ರಕ್ಷಿಸಿ, ನಂಬಿದವರಿಗೆ ರಕ್ಷಕನಾಗಿ ಅಭಯವನ್ನು ನೀಡಿದನು ಪ್ರಹ್ಲಾದನ ಮೇಲೆ ಹೂವಿನ ಸುರಿಮಳೆ ಸುರಿಯಿತು.

ಮುಂಬರುವ ಸಂಚಿಕೆಯಲ್ಲಿ ಶ್ರೀ ವೆಂಕಟೇಶ್ವರನ ಮತ್ತೊಂದು ದಿವ್ಯಲೀಲೆಯನ್ನು ದರ್ಶಿಸೋಣ...

ಸ್ವಸ್ತಿ

ನೀತಿಪಾಠ

# ಪ್ರಾಮಾಣಿಕತೆಯ ಫಲ

**-ಶ್ರೀಮತಿ.ಸುಧಾಮಧುಸೂದನ್**

ಪ್ರಕಾಶನೆಂಬ ಒಬ್ಬ ಚಾಲಕನು ಒಂದು ಲಾರಿಯನ್ನು ಇಟ್ಟಿದ್ದ, ಅದಕ್ಕೆ ಅವನು ಇನ್ನೊಬ್ಬ ಚಾಲಕನನ್ನು ನೇಮಿಸಿ ದಿನವೂ ತನ್ನ ಲಾರಿಯಲ್ಲಿ ಅಗತ್ಯ ವಸ್ತುಗಳನ್ನು ಸಾಗಿಸಿ ಕೊಡುತ್ತಿದ್ದನು.ಯಾರು ಯಾವ ಹೊತ್ತಿನಲ್ಲಿ ಕೇಳಿದರೂ ಇಲ್ಲವೆನ್ನದೆ ಅವರಿಗೆ ತಲುಪಿಸುತ್ತಿದ್ದ.ಹೀಗೆ ಅವನು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದನು.

ಒಮ್ಮೆ ಒಂದು ಆಸ್ಪತ್ರೆಯಿಂದ ಅವನಿಗೆ ಕರೆ ಬಂತು ಹೀಗೆ ತಮ್ಮ ಆಸ್ಪತ್ರೆಗೆ ಬೇಕಾದ ಅಗತ್ಯ ವಸ್ತುಗಳನ್ನು ಕೊಂಡು ತರಬೇಕೆಂದು ಅವರು ವಿಳಾಸವನ್ನು ಹಾಗೂ ಅದು ತುಂಬಾ ತುರ್ತಾಗಿ ಬೇಕಾದ ವಸ್ತುಗಳು ಎಂದು ಅವನಲ್ಲಿ ಬೇಡಿಕೊಂಡರು. ಆದರೆ ಅದೇ ದಿನ ಅವನ ಚಾಲಕ ರಂಗ ರಜೆಯಲ್ಲಿದ್ದ. ಬಹಳ ಹೊತ್ತು ಯೋಚಿಸಿ ಕಡೆಗೆ ತಾನೇ ಲಾರಿ ತೆಗೆದುಕೊಂಡು ಹೋಗೋಣಾ ಎಂದು ನಿರ್ಧರಿಸಿದನು.

ಅವನು ವಿಳಾಸ ಕೊಟ್ಟಲ್ಲಿಗೆ ಹೋಗಿ ಅವಶ್ಯಕವಾಗಿದ್ದ ವಸ್ತುಗಳನ್ನು ತನ್ನ ಲಾರಿಯಲ್ಲಿ ತುಂಬಿ ಲಾರಿಯನ್ನು ಹೇಳಿದ ವಿಳಾಸಕ್ಕೆ ಕೊಂಡೊಯ್ಯಲು ಸಿದ್ಧನಾದನು. ಸರಿ ಲಾರಿಯಲ್ಲಿ ಸರಕುಗಳನ್ನು ತುಂಬಿ ಚಲಿಸ ತೊಡಗಿದನು. ಇನ್ನು ಒಂದು ಸ್ವಲ್ಪ ದೂರ ಹೋಗಿಲ್ಲ ಆಗಲೇ ಅವನ ಹಿಂದಿನ ಟೈರ್ ಪಂಚರ್ ಆಯಿತು.ಅವನು ಇಳಿದು ನೋಡಿ ಅಯ್ಯೋ ಅವರು ತುರ್ತಾಗಿ ಬೇಕೆಂದರಲ್ಲಾ ಎಂದು ಪೇಚಾಡಿಕೊಂಡು ಆ ಚಕ್ರವನ್ನು

ಬದಲಾಯಿಸಲು ತೊಡಗಿದನು.ಅವನು ಒಂದು ಕಾಗದ ಮೇಲೆ ಆ ಚಕ್ರವನ್ನು ಬಿಚ್ಚಿದ ನಾಲ್ಕು ನಟ್ಟುಸ್ಕ್ರುವನ್ನು ಇಟ್ಟನು. ಚಕ್ರ ತೆಗೆದನು. ಆದರೆ ಗಾಳಿಯು ಜೋರಾಗಿ ಬೀಸಲು ಅವನು ಇಟ್ಟಿದ ಆ ನಟ್ಟುಸ್ಕ್ರು ಎರಡೂ ಹಾರಿ ಪಕ್ಕದಲ್ಲಿದ್ದ ದೊಡ್ಡ ಮೋರಿಯೊಳಗೆ ಬಿದ್ದುಬಿಟ್ಟಿತು. ಇದನ್ನು ಕಂಡು ಪ್ರಕಾಶನು ಅಯ್ಯೋ ದೇವರೆ ನಾನ್ಹೇಗೆ ಹೋಗಲಿ ಆ ಸ್ಕ್ರುಗಳನ್ನೂ ತೆಗೆಯಲು ಸಾಧ್ಯವಿಲ್ಲವಲ್ಲಾ ಎಂದು ಕಂಗಲಾದನು.

ಅಷ್ಟರಲ್ಲಿ ಇದನ್ನೆಲ್ಲಾ ನೋಡುತ್ತಿದ್ದ ಒಬ್ಬ ಹುಚ್ಚ ಹತ್ತಿರ ಬಂದು. ಜೋರಾಗಿ ಪ್ರಕಾಶನನ್ನು ನೋಡಿ ನಕ್ಕ, ಪ್ರಕಾಶನೋ ಕೋಪದಿಂದ "ನಗು ನನ್ನ ಪರಿಸ್ಥಿತಿ ನೋಡಿ ಇನ್ನೇನು ಮಾಡುವೆ" ಎಂದನು ಹಾಗೆಯೇ ಆ ಹುಚ್ಚನಿಗೆ ನೀನೇನಾದರು ಈ ಸ್ಥಿತಿಯಲ್ಲಿದ್ದರೆ ಏನು ಮಾಡುತ್ತಿದ್ದೆ? ಎಂದನು. ಅದಕ್ಕೆ ಆ ಹುಚ್ಚುನು "ಅಯ್ಯಾ ನಾನು ಹುಚ್ಚನಿರಬಹುದು ಆದರೆ ಮೂರ್ಖನಲ್ಲ ಕೇಳು, ನಿನ್ನ ಇನ್ನು ಮೂರು ಟೈರ್‌ಗಳ ಒಂದೊಂದು ಸ್ಕ್ರುಬಿಚ್ಚಿ ಈ ನಿನ್ನ ಟೈರ್‌ಗೆ ಅಳವಡಿಸು ಹೊತ್ತಾಯ್ತು? ಎಂದು ಹೇಳುತ್ತಾ ಓಡಿ ಹೋದನು. ಇದನ್ನು ಕೇಳಿ ಪ್ರಕಾಶನಿಗೆ ದೇವರೇ ನನಗೆ ಸಹಾಯ ಮಾಡಿದನೆಂದು ಇಂತಹ ಸಲಹೆ ಕೊಟ್ಟ ಆ ಹುಚ್ಚನನ್ನು ಮನದಲ್ಲಿ ಅಭಿನಂದಿಸಿದನು. ಬೇಗ ಬೇಗ ಟೈರ್ ರೆಡಿ ಮಾಡಿಕೊಂಡು ಕೊಟ್ಟ ವಿಳಾಸಕ್ಕೆ ತಲುಪಿಸಿ ಅವರಿಂದ ಹೊಗಳಿಸಿ ಕೊಂಡನು. ಹಾಗೆಯೇ ಅಲ್ಲೇ ಹತ್ತಿರವಿದ್ದ ರಿಪೇರಿ ಅಂಗಡೀಲಿ ರಿಪೇರಿ ಮಾಡಿಸಿಕೊಂಡು ಹೋದನು. ಇದರಿಂದ ಏನು ತಿಳಿಯುತ್ತೆ ಗೊತ್ತಾ ಮಕ್ಕಳೆ ಪ್ರಾಮಾಣಿಕನಾಗಿ ಇದ್ದರೆ ದೇವರೇ ಸಹಾಯ ಮಾಡುವನು ಎಂದು

ಕೃಷ್ಣಾರ್ಪಣಂ

# ಪ್ರಜ್ಞಾವಂತ ಬಾಲಕ



**ಹೆಸರು :** ಕೆ. ಅಚ್ಯುತ್ ಶರ್ಮ

**ತರಗತಿ :** ಎಲ್.ಕೆ.ಜಿ.

**ಜನ್ಮ ದಿನಾಂಕ :** 4 ವರ್ಷ 29 ದಿನಗಳು

**ತಂದೆಯ ಹೆಸರು :** ಕೆ. ಕಾಮೇಶ್

**ತಾಯಿಯ ಹೆಸರು:** ಶ್ರೀಮತಿ. ಶೈಲಜ

## ಪ್ರತಿಭೆ

ಈ ಪುಟ್ಟ ಪ್ರತಿಭೆ ವಿಶಿಷ್ಟವಾದ ವ್ಯಕ್ತಿತ್ವವನ್ನು ಹೊಂದಿದ್ದು, ಈತ ಯೂಟ್ಯೂಬ್‌ನ ಮೂಲಕ ಅನೇಕ ಶ್ಲೋಕಗಳನ್ನು ಒಂದು ಅಥವಾ ಎರಡು ದಿನಗಳಲ್ಲಿ ಬಾಯಿಪಾಠ ಮಾಡುತ್ತಾನೆ. ಒಂದು ತಪ್ಪು ಇಲ್ಲದಂತೆ ಬಾಯಿಗೆ ಬರುವವರೆಗೂ ಕಲಿಯುತ್ತಾನೆ. ಅತ್ಯಂತ ಆಶ್ಚರ್ಯಕರವಾದ ವಿಷಯವೆಂದರೆ ಈತ ತೆಲುಗು ಭಾಷೆಯನ್ನು ಯಾರ ಸಹಾಯವೂ ಇಲ್ಲದೇ ಓದಲು ಕಲಿತಿದ್ದಾನೆ, ಮತ್ತು ಸುನಾಯಾಸವಾಗಿ ಓದುತ್ತಾನೆ.

ಯೂ ಟ್ಯೂಬ್‌ನಲ್ಲಿ ಹೆಚ್ಚೂ ಕಡಿಮೆ ನೂರು ವಿಡಿಯೋಗಳನ್ನು ಹೊಂದಿರುತ್ತಾನೆ.

1. ವಿಷ್ಣು ಸಹಸ್ರನಾಮ ಸ್ತೋತ್ರ
2. ಲಲಿತಸಹಸ್ರನಾಮ ಸ್ತೋತ್ರ
3. ಶಿವ ಭುಜಂಗ ಸ್ತೋತ್ರ
4. ಸಪ್ತಶ್ಲೋಕಿ-ರಾಮಾಯಣ
5. ಶಿವಾಪರಧಾಕ್ಷಮಾಪನ ಸ್ತೋತ್ರ
6. ಸಂಪೂರ್ಣ ಭಗವದ್ಗೀತೆ (18 ಅಧ್ಯಾಯಗಳು)

## ಪಡೆದಿರುವ ಬಹುಮಾನಗಳು

ಈ ಪ್ರತಿಭೆ ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ಹೆಸರುಗಳಿಸಿದೆ.

ಸಂಪೂರ್ಣ ಭಗವದ್ಗೀತೆಯನ್ನು ಓದುವುದು, ಬರೆಯುವುದು ಮತ್ತು ನೋಡದೇ ಸ್ಪಷ್ಟವಾಗಿ ಉಚ್ಚರಿಸುವುದು (700 ಶ್ಲೋಕಗಳು).

ಇದರಿಂದಾಗಿ ಇಂಡಿಯಾ ಬುಕ್ ಆಫ್ ರೆಕಾರ್ಡ್ ಮಾಡಿರುತ್ತಾನೆ.

ಈ ಎಳೆ ಪ್ರತಿಭೆ ಮತ್ತಷ್ಟು ಹೆಸರನ್ನು ಸಾಧಿಸಲಿ ಎಂದು ಸಪ್ತಗಿರಿ ಮನಸಾರಾ ಹಾರೈಸುತ್ತಿದೆ.

# ಕ್ವಿಜ್

-ನಿರ್ವಹಣೆ ಶ್ರೀಮತಿ. ಸೂರ್ಯವಂಶಿ

1) ಸಪ್ತಋಷಿಗಳು ಅಂದರೆ ಎಷ್ಟು ಜನ?

ಅ) ಏಳು ಆ) ಆರು

ಇ) ಐದು ಈ) ಮೂರು

2) ವಸಿಷ್ಠ ಮಹರ್ಷಿಯ ಧರ್ಮ ಪತ್ನಿ ಯಾರು?

ಅ) ಆದಿತಿ ಆ) ದಿತಿ

ಇ) ಕದ್ರುವ ಈ) ಅರುಂಧತಿ

3) ವಿಶ್ವಾಮಿತ್ರ ಮಹರ್ಷಿಯ ಮೊದಲ ಹೆಸರೇನು?

ಅ) ಕುಶಿಕ ಆ) ಕೌಶಿಕ

ಇ) ಅಗಸ್ತ್ಯ ಈ) ಜಮದಗ್ನಿ

4) ವಿಶ್ವಾಮಿತ್ರ ಮಹರ್ಷಿಯ ಧರ್ಮಪತ್ನಿ ಯಾರು?

ಅ) ಕುಮುದ್ವತಿ ಆ) ಅನಸೂಯ

ಇ) ಅಹಲ್ಯ ಈ) ಮೇನಕಾ

5) ಜಮದಗ್ನಿ ಮಹರ್ಷಿಯ ಧರ್ಮಪತ್ನಿ ಯಾರು?

ಅ) ದಮಯಂತಿ ಆ) ರೇಣೂಕಾದೇವಿ

ಇ) ಅನಸೂಯ ಈ) ದಿತಿ

6) ಗೌತಮ ಮಹರ್ಷಿಯ ಧರ್ಮಪತ್ನಿ ಯಾರು?

ಅ) ಅನಸೂಯ ಆ) ಅಹಲ್ಯ

ಇ) ವಿನುತ ಈ) ಶುಚಿದೇವಿ

7) ಶ್ರೀ ರಾಮನಿಂದ ಶಾಪವಿಮುಕ್ತಳಾದ ಸ್ತ್ರೀ ಯಾರು?

ಅ) ಶಬರಿ ಆ) ಅಹಲ್ಯ

ಇ) ದ್ರೌಪದಿ ಈ) ತ್ರಿಜಟೆ


• • • • • • • • • • • •

ಉತ್ತರಗಳು:

1) ಅ 2) ಈ 3) ಆ 4) ಅ 5) ಆ 6) ಆ 7) ಆ

# ಚಿತ್ರಲೇಖನ

ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಮೇಲಿನ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...



SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printing on 25-11-2020. Regd. with the Registrar of Newspapers under "RNI" No.10742,
Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

